ಅಷ್ಟೇನು ಹೇಳದೆ ಹೆಡ್‌ಮಾಸ್ಟರ್ ಹತ್ರ ಮಾತಾಡಿ, ಸ್ಕೂಲ್ ಮಕ್ಕಳಿಗೆ ಹಿಮಾಲಯ ಬೆಟ್ಟದ ರೂಪ, ಮಂಜುಗಡ್ಡೆ ಮುತ್ತಿರೊ ರೂಪ, ಅಲ್ಲಿರೊ ಸಾಧು ಸನ್ಯಾಸಿಗಳು, ಅವರ ಸಾಧನೆ, ಅವರ ಯೋಗ, ಊಟ ತಿಂಡಿ ಎಲ್ಲವನ್ನು ಕಥೆ ಮಾಡಿ ಹೇಳಿದ.

ವಾರ ವಾರ ತಿಂಗಳು ಆಗೋದರಲ್ಲಿ ಯಾರಿವರು ಅನ್ನೊ ಕುತೂಹಲ ಕಡಿಮೆಯಾತು. ಆವಪ್ಪ ಜೊತೆಗೆ ಸಾಧು ಬಸವ ಅಷ್ಟೆ. ಅದೊಂದಿನ ಚನ್ನಕ್ಕನ ಹೋಟೆಲ್‌ನಲ್ಲಿ ಊಟದ ಗಂಟು ಇಸಕೊಳ್ಳೊವಾಗ, "ಅದೇನು ಚನ್ನಕ್ಕ ನಿನ್ನ ಗಂಡ ಈರಣ್ಣನೆ ಕಾಣಲಿಲ್ಲ?" ಅಂದುಬಿಟ್ಟು, ಕೇಳಬಾರದಿತ್ತು ಅಂದು ತಡವರಿಸಿದ. "ಅಯ್ಯೊ ನನಗಂಡ ದಮ್ಮು ಗೂರಲಿನವ. ತೀರಿಹೋಗಿಯೆ ಹನ್ನೆಲ್ಡು ವರ್ಷಾತು" ಅಂದೊ. ತಟ್ಟನೆ ಗಂಟು ಇಸಕೊಂಡು ಬಂದ. 'ಇದೇನು ನನಗಂಡನ ಗುರುತು ಇರೋ ಮನುಷ್ಯ. ಅಂದರೆ, ಊರು ಬಲ್ಲವ. ಯಾರಿದ್ದಾರು? ತಲೇಲಿ ವಾರವೆಲ್ಲಾ ಹುಡುಕಿದೊ. ಹೊಳಿಲಿಲ್ಲ. ಆಮ್ಯಾಗೊಂದಿನ ಮುರುಗೆಪ್ಪ ಬಂದಾಗ ಚನ್ನಕ್ಕ ಹೇಳಿದೊ, "ಅದೊ ಅಲ್ಲಿ ಕಟ್ಟೆಮ್ಯಾಲೆ ಕುಂತವನಲ್ಲ ಆ ಮನ್ಸ ಯಾರು ವಸಿ ನೋಡಣ್ಣ" ಅಂದೊ. ಅವನು ಹಂಗೆ ಅಡ್ಡಾಡಿ ಹಿಂಗೆ ಅಡ್ಡಾಡಿ ನೋಡಿದ. 'ನೋಡಿದ್ರೆ ನನ ತಮ್ಮನೆ ಇದ್ದಂಗವನೆ. ಮನಿಗೆ ಬರದೆ ಇಲ್ಯಾಕೆ ಕುಂತವನೆ? ಏನಿದ್ದಾತೊ ಏನೊ?' ಅಂದು ಮನಿಗೆ ಬಂದು ಮಕ್ಕಳಿಬ್ಬರಿಗೂ, "ನೋಡು, ಊರ ಮುಂದೆ ಹನುಮಪ್ಪನ ಕಟ್ಟೆಮ್ಯಾಗೆ ಕುಂತಿರೋನು ನನ್ನ ತಮ್ಮ ಶಾಂತಪ್ಪ ಅನಿಸುತ್ತೆ. ಇಪ್ಪತ್ತೆರಡು ವರ್ಷದ ಹಿಂದೆ ಮನೆಬಿಟ್ಟು ಹೋದವ ಈಗ ಇಲ್ಲಿ ಬಂದು ಕುಂತವನೆ. ನಮ್ಮದು ಮೂವತ್ತಾರು ಎಕರೆ ಹೊಲ. ಅರ್ಧಕ್ಕರ್ಧ ಅಡಿಕೆ ತೋಟಮಾಡಿ ಈಗೀಗ ಫಲಕಂಡುಕೋತಾ ಇದೀವಿ. ಅದ್ಯಾವಾಗ, ಅದೆಲ್ಲಿ ಸತ್ತನೋ ಅಂತ ಸುಮ್ಕಾಗಿದ್ವಿ. ಈಗ ಇವ ಬಂದು ನನ್ನ ಪಾಲು ಕೊಡು ಅಂದರೆ, ನಾವು ಕಟ್ಟಿ ಬೆಳಸಿದ ತೋಟ ಹೊಲದಲ್ಲಿ ಅರ್ಧ ಪಾಲು ಕೊಡಬೇಕು. ಹೋದೋನು ಹೋದ, ಸತ್ತ ಅತ್ಲಾಗೆ ಅಂತ ನೆಮ್ಮದೀಲಿ ಇದ್ವಿ. ಇದೀಗ ವಕ್ಕರಿಸಿಕೊಂಡ" ಅಂದ.

ಎಸ್ಸೆಸ್ಸೆಲ್ಸಿ ಪಾಸಾದರೂ ಅಣ್ಣ ಮುರುಗೆಪ್ಪ ಕಾಲೇಜಿಗೆ ಹೋಗೋದು ಬ್ಯಾಡ ಅಂದ. ಹೊಲಮನೆ ಕೆಲಸ ನನಗೆ ಒಬ್ಬೊನಿಗೆ ಆಗದು ಅಂದ. ನನಗೂ ಹೆಂಗೆ ಕೆಲಸ ಮಾಡಿದರೆ ಮೂರುದಿನ ಮೈಕೈ ತಡಿಲಾರದಷ್ಟು ನೋವೋ ನೋವು. ಜೀವ ಒದ್ದಾಡೊ ಸಂಕಟ. ಇದುನ್ನೆಲ್ಲಾ ಸರಿಯಾಗಿ ಯಾವತ್ತೂ ತಿಳಿಲಿಲ್ಲ ಅಣ್ಣ. ಕೆಲಸ ತಪ್ಪಿಸಿಕೊಳ್ಳಾಕೆ ನಾಟಕ ಆಡ್ತವನೆ ಅಂದುಕೊಂಡ. ಗಟ್ಟಿ ಕೆಲಸದೋನು ಅವ್ನು. ನನ್ನನ್ನು ಹಾಗೆ ಕೆಲಸ ಮಾಡಾಕೆ ಒತ್ತಾಯ ಮಾಡೋನು. ಮಾತೆತ್ತಿದರೆ ಸಿಡುಕೋನು. ಅಪ್ಪ ಅವ್ವ ತೀರೋದ ಮ್ಯಾಗೆ ಅಣ್ಣನೆ ಎಲ್ಲಾ. ಆದರೆ, ಅಣ್ಣನ ಬುದ್ಧಿ ನನಗೆ ಸೇರವಲ್ಲದು. ಆವಾಗೀವಾಗ ಭಜನೆಗೆ ಅಂತ ಅಕ್ಕಪಕ್ಕದ ಊರೋರು ಕರೆದರೆ ಹಂಗಿಂದಂಗೆ ಹೋಗಿ ಬಿಡತಿದ್ದೆ. ಬಂದ ಮ್ಯಾಲೆ ಅಣ್ಣನದು ಸಿಡುಕು ಸಿಟ್ಟು. ಬೆಂಕಟಿ ಕಿತ್ತೋಗಂಗೆ ಮುಗಿಲು ಹಾರಂಗೆ ಕಿರುಚಿ ಬೈತಿದ್ದ. ಆದರೆ, ನಮ್ಮ ಅತ್ತಿಗೆಮ್ಮಾ ಅಂದ್ರೆ ಅತ್ತಿಗೆಮ್ಮ ತಾಯಿ ಇದ್ದಂಗೆ. ಒಂದಿನ ಒಂದ್ ಗೊಣಗಲಿಲ್ಲ. ನಾನು ಕೆಲಸ ಮಾಡಿದರೂ ಮಾಡದಿದ್ದರೂ ಏನೊಂದು ಮಾತು ಅನುತಿದ್ದಿಲ್ಲ. ಊಟಕೆ ನೀಡೋದು ಎಲ್ಲದರಲ್ಲು ನಿರ್ವಂಚನೆ ನಂತಾಯಿದು. ನನಗೆ ಏನಾದರೂ ಕಾಸು ಬೇಕಾದರೆ ಅತ್ತಿಗೆಮ್ಮನ್ನ ಕೇಳಿದರೆ ಇಲ್ಲಾ ಅಂದುದ್ದೆ ಇಲ್ಲ, ಅಂತಾ ನಂತಾಯಿ. ಯಾರಾದರೂ ಹಾಲು ಮೊಸರು ಬೇಕು ಅಂತ ಬಂದ್ರೆ ಅವರ್ನ ಸಿಡುಕಿ ಓಡಿಸಿಬಿಡೋನು ಅಣ್ಣ. ಅತ್ತಿಗೆಮ್ಮಾ 'ನಮ್ಮ ಯಜಮಾನರು ಇಲ್ಲದ ಹೊತ್ತು ನೋಡಿ ಬನ್ನಿರಿ' ಅಂದು, ದುಡ್ಡ ಇಸಗೊಂಡೊ ಇಲ್ಲದೇನೊ ಕೊಡೋರು. ಮಜ್ಜಿಗೆ ಅಂತ ತಂಬಿಗೆ ತಂದ್ರೆ ತುಂಬಿ ತುಂಬಿಕೊಡೋರು ಕಾಸಿಲ್ದೆ.

ಆದರೂ ಆವತ್ತೊಂದಿನ ಗಣಪತಿ ಕಳಿಸಾಕೇಂತ ಭಜನೆಗೆ ಹೋಗಿ ಬಂದ ಮ್ಯಾಲೆ ಅಣ್ಣ ಸಿಡಿದೆದ್ದ. ನಾನು ರೊಟ್ಟಿ ತಿನುತಾಯಿದ್ದೆ, ಅರ್ಧ ರೊಟ್ಟಿ ಬಾಯಾಗಿತ್ತು "ಎಲ್ಲಿ ಹೋಗಿದ್ಯೋ ಮನೆಹಾಳು